ಕ್ರಿಮಿನಲ್.ಮಿಸ್ಲೇನಿಯಸ್.ನಂ. 1444/2022

ಆರ್.ಡಬ್ಲು.೧

**<u>ಸಾಕ್ಷಿಯನ್ನು ಇಂದು ದಿನಾಂಕಃ 15.03.2025 ರಂದು ಕರೆದು ಪ್ರಮಾಣೀಕರಿಸಲಾಯಿತು</u>**

**<u>ಮುಂದುವರೆದ ಮುಖ್ಯ ವಿಚಾರಣೆ ಎದುರುದಾರ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದ</u>**

ಅಸಿಸ್ಟೆಂಟ್ ಕಲೆಕ್ಟರ್ ಸೋಲಾಪುರ-೨ ಸೋಲಾಪುರ ರವರು ಹಿರಿಯರ ನಾಗರೀಕರ ಕಾಯ್ದೆಯಡಿಯಲ್ಲಿ ಮಾಡಿರುವ ಆದೇಶದ ಧೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-೧ ಎಂದು ಅದರ ತರ್ಜುಮೆಯನ್ನು ನಿ.ಆರ್-೧(ಎ) ಎಂದು, ತರ್ಜುಮೆ ಮಾಡಿದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-೨ ಎಂದು ಗುರುತಿಸಲಾಯಿತು. ಪೆಟಿಶನ್ ನಂ. 494/2004 ಕೌಟುಂಬಿಕ ನ್ಯಾಯಾಲಯ ಸೋಲಾಪುರದಲ್ಲಿ ಹಾಕಿದ ಅರ್ಜಿಯ ಧೃಢೀಕೃತ ಪ್ರತಿಯನ್ನು ನಿ.ಆರ್-೩ ಎಂದು, ಅದರ ತರ್ಜುಮೆಯನ್ನು ನಿ.ಆರ್.೩(ಎ) ಎಂದು, ತರ್ಜುಮೆದಾರರ ಪ್ರಮಾಣ ಪತ್ರವನ್ನು ನಿ.ಆರ್.-೪ ಎಂದು ಗುರುತಿಸಲಾಯಿತು.

ಇಂಗಳಗಿ ಗ್ರಾಮದ ಸ.ನಂ.199/1 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್.-೫ ಎಂದು, ಅದರ ತರ್ಜುಮೆಯನ್ನು ನಿ.ಆರ್.೫(ಎ) ಎಂದು ಗುರುತಿಸಲಾಯಿತು. ಕೌಟುಂಬಿಕ ನ್ಯಾಯಾಲಯ ಸೋಲಾಪುರದಲ್ಲಿ ಸಲ್ಲಿಸಿದ ಮ್ಯಾರೇಜ್ ಕಲಂ 9 ರಡಿಯಲ್ಲಿ ಸಲ್ಲಿಸಿದ ಅರ್ಜಿಯ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ನಿ.ಆರ್.-೬ ಎಂದು, ಸದರಿ ಅರ್ಜಿಗೆ ಸಲ್ಲಿಸಿದ ತಕರಾರಿನ ಧೃಢೀಕೃತ ಪ್ರತಿಯನ್ನು ಸಲ್ಲಿಸಿದ್ದು ಅದನ್ನು ನಿ.ಆರ್.-೭ ಎಂದು, ಹಿರಿಯ ಶ್ರೇಣಿ ದಿವಾನಿ ನ್ಯಾಯಾಲಯ ಸೋಲಾಪುರದಲ್ಲಿ ಸಲ್ಲಿಸಿದ ಪಾಲು ವಾಟ್ನಿ ದಾವೆಯ ವಾದ ಪತ್ರದ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್.-೮ ಎಂದು, ಸಿ.ಎಸ್. ನಂ.787/2022 ರ ಆದೇಶ ಪತ್ರದ ಧೃಢೀಕೃತ ನಕಲನ್ನು ನಿ.ಆರ್.೯ ಎಂದು, ಸಚೀನ್ ಎಸ್. ಕುಲಕರ್ಣಿ ವೈದ್ಯರು ನೀಡಿರುವ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದನ್ನು ನಿ.ಆರ್.೧೦ ಎಂದು, ಅದರ ತರ್ಜುಮೆಯನ್ನು ನಿ.ಆರ್.೧೦(ಎ) ಎಂದು, ಸಂಗೋಳಗಿ ಗ್ರಾಮದ ಸ.ನಂ. 134/*ನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್.೧೧ ಎಂದು, ಆಕ್ಟೋಬರ್ 2024 ಕ್ಕೆ ಸಂಬಂಧಿಸಿದ ಪೆನಶನ್ ಸ್ಲಿಪನ್ನು ಹಾಜರುಪಡಿಸಿದ್ದು ದನ್ನು ನಿ.ಆರ್.-೧೨ ಎಂದು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಲಬುರಗಿ ವಲಯ ಕಲಬುರಗಿ ಇವರು ನೀಡಿರುವ ಶಿಕ್ಷಕರ ವಿವರ ಪಟ್ಟಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್.೧೩ ಎಂದು ಗುರುತಿಸಲಾಯಿತು.

**[** ಈ ಹಂತದಲ್ಲಿ ಎದುರುದಾರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.**]**

ಓ.ಹೇ.ಕೆ.ಸರಿ.ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ.ಸಿ.ಆಳಂದ.